# ವ್ಯಾಕುಲತೆಯ ವೃದ್ಧಿ

**ಒಬ್ಬ ಶ್ರೀಮಂತನು** ಹೊರದೇಶಕ್ಕೆ ಪ್ರಯಾಣ ಹೊರಟಿದ್ದನು. ತನ್ನ ಸೇವಕರನ್ನೆಲ್ಲ ಹತ್ತಿರ ಕರೆದು ತನ್ನ ವಸ್ತುಗಳನ್ನೆಲ್ಲ ಅವರಿಗೆ ಕೊಟ್ಟು ಅವುಗಳನ್ನು ಜೋಪಾನವಾಗಿ ನೋಡಿಕೊಳ್ಳಲು ಹೇಳಿದನು. ಪ್ರತಿಯೊಬ್ಬರಿಗೂ ಅವರವರ ಯೋಗ್ಯತೆಗೆ ಅನುಗುಣವಾಗಿ ಹಣವನ್ನೂ ನೀಡಿದನು. ಒಬ್ಬನಿಗೆ ನೂರು ರೂಪಾಯಿ ಕೊಟ್ಟನು. ಇನ್ನೊಬ್ಬನಿಗೆ ಐವತ್ತು ರೂಪಾಯಿ ಕೊಟ್ಟನು. ಮತ್ತೊಬ್ಬನಿಗೆ ಹತ್ತು ರೂಪಾಯಿ ಕೊಟ್ಟನು. ಅನಂತರ ಅವನು ತನ್ನ ಪ್ರವಾಸಕ್ಕೆ ಹೊರಟನು.

ನೂರು ರೂಪಾಯಿ ಪಡೆದವನು ತನ್ನ ಬುದ್ಧಿಯನ್ನು ಉಪಯೋಗಿಸಿದ. ಅವನಿಗೆ ವ್ಯಾಪಾರದಲ್ಲಿ ತುಂಬ ಪರಿಣತಿ. ತಾನು ಪಡೆದ ನೂರು ರೂಪಾಯಿಯನ್ನು ವ್ಯಾಪಾರದಲ್ಲಿ ತೊಡಗಿಸಿ ನೂರು ರೂಪಾಯಿ ಐನೂರು ರೂಪಾಯಿ ಆಗುವಂತೆ ಮಾಡಿದ.

ಇನ್ನೊಬ್ಬನು ಆರ್ಥಿಕ ವಿಷಯದಲ್ಲಿ ತುಂಬ ಚತುರ. ಹಣವನ್ನು ದ್ವಿಗುಣ, ತ್ರಿಗುಣಗೊಳಿಸುವುದು ಹೇಗೆಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಯಾವ ಬ್ಯಾಂಕಿನಲ್ಲಿ ಯಾವಾಗ ಹಣ ಇಡಬೇಕು, ಯಾವಾಗ ತೆಗೆಯಬೇಕು, ಷೇರು ಮಾರುಕಟ್ಟೆಯಲ್ಲಿ ಹೇಗೆ ತೊಡಗಿಸಬೇಕು ಎಂಬ ವಿಷಯಗಳೆಲ್ಲೆಲ್ಲ ಅವನಿಗೆ ಒಂದು ಆರನೇ ಇಂದ್ರಿಯ ಇತ್ತು. ಅವನು ತಾನು ಪಡೆದ ಐವತ್ತು ರೂಪಾಯಿಯನ್ನು ಸಾವಿರ ರೂಪಾಯಿಯಾಗಿ ವೃದ್ಧಿಸಿದ.

ಮೂರನೆಯವನು ವ್ಯವಹಾರಚತುರನಲ್ಲ. ಆದರೆ ಸ್ವಾಮಿ ನಿಷ್ಠೆಯುಳ್ಳವನು. ಅವನು ತಾನು ಪಡೆದ ಹಣವನ್ನು ಪೆಟ್ಟಿಗೆಯಲ್ಲಿ ಇಟ್ಟು ಬೀಗಮುದ್ರೆಯನ್ನು ಹಾಕಿದನು.

ಶ್ರೀಮಂತನು ಹಲವು ತಿಂಗಳುಗಳನಂತರ ತನ್ನ ವಿದೇಶಯಾತ್ರೆಯನ್ನು ಮುಗಿಸಿ ಹಿಂದಿರುಗಿದನು. ಮೊದಲನೆಯ ಸೇವಕನನ್ನು ತಾನು ಕೊಟ್ಟ ಹಣದ ಬಗ್ಗೆ ವಿಚಾರಿಸಿದನು. ಅವನು ಅದನ್ನು ವ್ಯಾಪಾರದಲ್ಲಿ ತೊಡಗಿಸಿ ಅದು ಐನೂರು ರೂಪಾಯಿ ಆಗಿರುವ ವಿಷಯ ತಿಳಿಸಿ, ಆ ಎಲ್ಲ ಹಣವನ್ನೂ ಅವನಿಗೆ ಹಿಂತಿರುಗಿಸಿದನು. ಶ್ರೀಮಂತನಿಗೆ ಅತ್ಯಂತ ಸಂತೋಷವಾಯಿತು. "ಈ ಹಣವನ್ನು ನೀನೇ ಇಟ್ಟುಕೊ. ಇದು ನಿನ್ನ ದುಡಿಮೆಯ ಫಲ' ಎಂದು ಹೇಳಿ ಆ ಐನೂರು ರೂಪಾಯಿಯನ್ನು ಆ ಸೇವಕನಿಗೇ ನೀಡಿದನು.

ಹಾಗೆಯೇ ಎರಡನೆಯ ಸೇವಕನನ್ನು ಹಣದ ಬಗ್ಗೆ ವಿಚಾರಿಸಿದನು. ಅವನೂ ತನ್ನ ಆರ್ಥಿಕ ಸಾಹಸವನ್ನು ವಿವರಿಸಿ ತಾನು ಗಳಿಸಿದ ಒಂದು ಸಾವಿರ ರೂಪಾಯಿಯನ್ನು ಶ್ರೀಮಂತನಿಗೆ ಕೊಟ್ಟು ನಮಸ್ಕರಿಸಿದನು.

ಶ್ರೀಮಂತನಿಗೆ ಅತ್ಯಾನಂದವಾಯಿತು. ಅವನ ಆರ್ಥಿಕ ಕೌಶಲ್ಯವನ್ನು ಬಹಳವಾಗಿ ಪ್ರಶಂಸಿಸಿದನು. "ನಿನ್ನ ಜಾಣತನವನ್ನು ನಾನು ತುಂಬ ಮೆಚ್ಚುತ್ತೇನೆ. ನಿನ್ನಂತಹ ಸೇವಕನನ್ನು ಪಡೆದ ನಾನೇ ಧನ್ಯ. ಈ ಒಂದು ಸಾವಿರ ರೂಪಾಯಿಯನ್ನು ನಿನ್ನ ಪ್ರತಿಭೆಯ ಪುರಸ್ಕಾರವಾಗಿ ನಿನಗೇ ಕೊಡುತ್ತೇನೆ. ತೆಗೆದುಕೊ" ಎಂದನು.

ಈಗ ಮೂರನೆಯವನ ಸರದಿ. ಅವನು ಮೊದಲು ಶ್ರೀಮಂತನ ಪಾದಕ್ಕೆರಗಿದನು. ಮೊಳಕಾಲೂರಿ ಕುಳಿತು ಕೈಮುಗಿದುಕೊಂಡು ಹೇಳಿದನು :"ಸ್ವಾಮಿ, ನಾನು ನಿಮ್ಮ ಸೇವಕ. ನೀವು ಏನು ಹೇಳುತ್ತೀರೊ ಎಷ್ಟು ಹೇಳುತ್ತೀರೊ ಅಷ್ಟು ಮಾಡುವುದು ನನ್ನ ಕರ್ತವ್ಯ. ಆದ್ದರಿಂದ ನೀವು ನೀಡಿದ ಹಣವನ್ನು ನಾನು ಜೋಪಾನವಾಗಿ ಬೀಗಹಾಕಿ ಇಟ್ಟಿದ್ದೆ. ನೀವು ಅದನ್ನು ಈಗ ಸ್ವೀಕರಿಸಬೇಕು.' ಹೀಗೆ ಹೇಳಿ ತಾನು ಪಡೆದ ಹತ್ತು ರೂಪಾಯಿಯನ್ನು ಅತ್ಯಂತ ಭಯ ಭಕ್ತಿಯಿಂದ ಶ್ರೀಮಂತನಿಗೆ ನೀಡಿದನು.

ಶ್ರೀಮಂತನಿಗೆ ಕೋಪ ಬಂತು. ಅವನು ಕಿಡಿಕಿಡಿಯಾಗಿ ಗುಡುಗಿದ: "ಎಲವೊ ಮೂರ್ಖ, ನಿನ್ನ ನಿಷ್ಠೆಗೆ ಬೆಂಕಿ ಹಾಕ! ನೀನೇಕೆ ಹಣವನ್ನು ಸುಮ್ಮನೆ ಇಟ್ಟುಕೊಂಡಿದ್ದೆ? ಅದನ್ನು ತೊಡಗಿಸಿ ವೃದ್ಧಿಸಬೇಕಿತ್ತು. ನೀನು ಹಾಗೆ ಮಾಡದೆ ಇದ್ದುದರಿಂದ ಈ ಹತ್ತು ರೂಪಾಯಿಯೂ ನಿನಗೆ ಇಲ್ಲ. ಹೋಗು.'

ಸೇವಕನು ಸಪ್ಪೆ ಮುಖ ಹಾಕಿಕೊಂಡು ಹಿಂತಿರುಗಿದನು.

ಇದೇ ಆಧ್ಯಾತ್ಮಿಕ ಜೀವನಕ್ಕೂ ಅನ್ವಯಿಸುತ್ತದೆ. ಭಗವಂತನು ನಮಗೆ ಆಧ್ಯಾತ್ಮಿಕ ವ್ಯಾಕುಲತೆಯನ್ನು ನೀಡುತ್ತಾನೆ. ಕೆಲವರು ಆ ವ್ಯಾಕುಲತೆಯನ್ನು ಸತ್ಸಂಗದ ಮೂಲಕ, ಸಚ್ಚಿಂತನೆಯ ಮೂಲಕ, ಸಾಧನೆಯ ಮೂಲಕ ವೃದ್ಧಿಸುತ್ತಾ ಹೋಗುತ್ತಾರೆ. ಹಾಗೆ ಸಾಧನೆಯಲ್ಲಿ ಮುಂದುವರೆದಂತೆಲ್ಲ ಅವರು ಹೆಚ್ಚು ಹೆಚ್ಚು ಭಗವತ್ಕೃಪೆಗೆ ಪಾತ್ರರಾಗುತ್ತಾರೆ.

ಇನ್ನು ಕೆಲವರು ತಾವು ಪಡೆದ ವ್ಯಾಕುಲತೆಯನ್ನು ವೃದ್ಧಿಸಿಕೊಳ್ಳುವ ತಂಟೆಗೇ ಹೋಗುವುದಿಲ್ಲ. ತಮ್ಮ ಹಳೆಯ ಜೀವನ ವಿಧಾನವನ್ನೇ ಮುಂದುವರಿಸುತ್ತಾರೆ. ಆಧ್ಯಾತ್ಮಿಕ ಜೀವನವನ್ನು ಗಂಭೀರವಾಗಿ ಸ್ವೀಕರಿಸದೆ, ಅಸಡ್ಡೆಯಿಂದ, ಪ್ರಮಾದದಿಂದ ಇರುವ ಸ್ವಲ್ಪ ವ್ಯಾಕುಲತೆಯನ್ನೂ ಕಳೆದುಕೊಳ್ಳುತ್ತಾರೆ. ಅದು ವೃದ್ಧಿಯಾಗದೆ ಇದ್ದರೆ ಕ್ಷೀಣವಾಗುತ್ತದೆ.

ವ್ಯಾಕುಲತೆಯು ನಮಗೆ ಬೀಜರೂಪದಲ್ಲಿ ಸಿಕ್ಕುತ್ತದೆ. ಅದಕ್ಕೆ ನೀರೆರೆದು, ಗೊಬ್ಬರ ಹಾಕಿ, ಕಳೆ ಕಿತ್ತು ಬೆಳೆಸುವುದು ನಮ್ಮ ಕರ್ತವ್ಯ. ಇಲ್ಲದಿದ್ದರೆ ಬೀಜ ನಿಸ್ಸತ್ವವಾಗುತ್ತದೆ. ಒಂದು ವೇಳೆ ಸ್ವಲ್ಪ ಮೊಳೆತರೂ ಕಳೆ ಅದನ್ನು ಬೆಳೆಯಲು ಬಿಡುವುದಿಲ್ಲ.

ಆದ್ದರಿಂದ ಭಗವಂತನಿತ್ತ ಈ ಅಪೂರ್ವ ಆಸ್ತಿಯನ್ನು ಬೆಳೆಸಿಕೊಳ್ಳುವುದು ನಮ್ಮ ಕೈಯಲ್ಲಿದೆ.

(ಸಾಧಾರ: ಯೇಸುಕ್ರಿಸ್ತನು ಹೇಳಿದ ದೃಷ್ಟಾಂತ ಕಥೆ.)